ಕರ್ನಾಟಕ ಸರ್ಕಾರ

ಉಪ ತಹಸೀಲ್ದಾರರು ನಾಡಕಾರ್ಯಾಲಯ, ಚೋರನೂರು ಇವರ ನಡಾವಳಿಗಳು :

ಉಪಸ್ಥಿತಿ : ಶ್ರೀ ಗುರುರಾಜ ಕೆ. ದೇಸಾಯಿ, ಉಪ ತಹಶೀಲ್ದಾರರು

ಅರ್ಜಿದಾರರು : 1) ರೇವಣ್ಣ ನಾಯ್ಕ್ ತಂದೆ ಲಚ್ಮಾನಾಯ್ಕ್
2) ಮಲ್ಲೇಶ ನಾಯ್ಕ್ ತಂದೆ ಲಚ್ಮಾನಾಯ್ಕ್
3) ಕೊಟ್ರೇಶ್ ನಾಯ್ಕ್ ತಂದೆ ಲಚ್ಮಾನಾಯ್ಕ್

ವಿರುದ್ದದಾರ : ಗ್ರಾಮ ಲೆಕ್ಕಾಧಿಕಾರಿಗಳು, ಚಿಕ್ಕಕೆರೆಯಾಗಿನಹಳ್ಳಿ ಮತ್ತು ಕಂದಾಯ ನಿರೀಕ್ಷಕರು, ಚೋರನೂರು.

**ವಿಷಯ: ಚಿಕ್ಕ ಕೆರೆಯಾಗಿನಹಳ್ಳಿ ಗ್ರಾಮದ ಭೂಮಿ ಸರ್ವೆ ನಂ:381/2 ರ ಕ್ಷೇತ್ರ 1–98.99 ಎಂಬ ನಮೂನೆ 21 ರಲ್ಲಿ ತಪ್ಪಾಗಿದ್ದು ಸರಿ ಪಡಿಸುವ ಕುರಿತು ವಿಚಾರಣೆ.**

ಪೀಠಿಕೆ :

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳಿಗೆ ನೋಟೀಸ್ ಜಾರಿಮಾಡಿ ದಿನಾಂಕ: 23/12/2015 ಮತ್ತು 03/06/2016 ರಂದು ವಿಚಾರಣೆಗೆ ಇಟ್ಟುಕೊಳ್ಳಲಾಗಿತ್ತು.

ಕಡತದಲ್ಲಿ ಲಭ್ಯವಿದ್ದ ದಾಖಲೆಗಳನ್ನು ಪರಿಶೀಲನೆ ಮಾಡಲಾಯಿತು. ದಿನಾಂಕ 18/08/2015 ರಂದು ಅರ್ಜಿದಾರರು ಸ್ವತ್ತಿನ ಸರ್ವೆ ನಂಬರ್ ಅನ್ನು ಮುದ್ರಾಂಕ ನೊಂದಣಿ ಮೂಲಕ ಸ್ಥಿರಾಸ್ತಿ ಪಾಲು ವಿಭಾಗವನ್ನು ದಸ್ತಾವೇಜುಗಳ ಮುಖಾಂತರ ಪರಸ್ಪರರು ಒಪ್ಪಿಕೊಂಡು ಪಾಲು ಮಾಡಿಕೊಟ್ಟಿರುತ್ತಾರೆ ಹಾಗೂ ಸದ್ರಿ ನಂ: 381/2 ರ ವಿಸ್ತೀರ್ಣ 02 ಎಕರೆ 97 ಸೆಂಟ್ಸ್ ಇದ್ದು, ಈ ಕ್ಷೇತ್ರಕ್ಕೆ ಅನುಗುಣವಾಗಿ ಪಾಲು ವಾಟನಿಯನ್ನು ಮಾಡಿಕೊಂಡು 11ಇ ನಕ್ಷೆಯನ್ನು ಮಾಡಿಸಿ ದಿನಾಂಕ: 17/08/2015 ರ ಮೂಲಕ ಕ್ಷೇತ್ರವಾರು ಹಂಚಿಕೆ ಹಕ್ಕನ್ನು ಮಾಡಿಕೊಂಡಿರುತ್ತಾರೆ, ಆದರೆ ತಹಶೀಲ್ ಕಾರ್ಯಾಲಯದಿಂದ ತೆಗೆಯಲ್ಪಟ್ಟ ನಮೂನೆ 21ರ ನೋಟೀಸ್‌ನಲ್ಲಿ ಆಕಸ್ಮಿಕವಾಗಿ ಕೈತಪ್ಪಿನಿಂದ ಕ್ಷೇತ್ರ 1–98–99 ಎಂದು ನಮೂದಾಗಿದ್ದು, ಆದ್ದರಿಂದ ಅದನ್ನು ಸರಿಪಡಿಸಲು ಭೂಮಿಕೇಂದ್ರದ ಆಪರೇಟರ್‌ಗೆ ಸೂಚಿಸಿ ಅರ್ಜಿದಾರರಿಗೆ ತಿಳಿಸುತ್ತಾ ಈ ಕೆಳಗಿನಂತೆ.

**ಹಬ.ತಕರಾರು. 38/15–16:** **ಆದೇಶ** **ದಿನಾಂಕ : 03/06/2016**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಈ ಆದೇಶ ನೊಂದಣಿ ಸಂಖ್ಯೆ :ಎಸ್.ಎನ್.ಆರ್. 1–00703–2015–16 ದಿನಾಂಕ : 19/08/2015 ರಂತೆ ಮತ್ತು 11–3 ನಕ್ಷೆ ಸಂಖ್ಯೆ : 12060415163659001 ರಂತೆ ಇದ್ದ ದಾಖಲೆಗಳಿಗೆ ಅನುಗುಣವಾಗಿ ಎಲ್ಲಾ ಅರ್ಜಿದಾರರಿಗೆ ತಲಾ 99 ವಿಸ್ತೀರ್ಣಕ್ಕೆ ನಮೂನೆ 21 ಚೆಕ್‌ಲೀಸ್ಟ್ ತೆಗೆದು ಕಂದಾಯ ನಿರೀಕ್ಷಕರು, ಚೋರನೂರು ಇವರಿಗೆ ವರ್ಗಾವಣೆಗಾಗಿ ಕಳಿಹಿಸಿಕೊಡುವಂತೆ ದಿನಾಂಕ 03/06/2016 ರಂದು ತೆರೆದ ನ್ಯಾಯಾಲಯದಲ್ಲಿ ಭಹಿರಂಗವಾಗಿ ಘೋಷಿಸಲಾಯಿತು.

**ಗುರುರಾಜ ಕೆ. ದೇಸಾಯಿ**
**ಉಪ ತಹಶೀಲ್ದಾರರು,**
**ಚೋರನೂರು.**

6/6/2016

**ಪ್ರತಿಗಳು :**

1. ಇದರ ಒಂದು ಪ್ರತಿಯನ್ನು ಭೂಮಿ ಕೇಂದ್ರದ ಗಣಕೀಕರಣದ ಸಂಕಲನಕ್ಕೆ
2. ಇದರ ಒಂದು ಪ್ರತಿಯನ್ನು ಅರ್ಜಿದಾರರಿಗೆ ಕೊಡಲಾಗಿದೆ.